ದಿನಾಂಕ: 27.03.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಈ ಪ್ರಕರಣ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ತಂದೆಯವರಿಗೆ ಇಬ್ಬರು ಹೆಂಡತಿಯರು. ನನ್ನ ತಾಯಿ ಮತ್ತು ನನ್ನ ದೊಡ್ಡಮ್ಮ ಮೊದಲೇ ಜುಬಾನಿ ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜುಬಾನಿ ಪಾಲುವಿಭಾಗದ ಪ್ರಕಾರ ಅವರವರ ಆಸ್ತಿ ಅವರವರ ಹಿಸ್ಸೆಗೆ ಬಂದು ಅವರವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಿಃ16.09.1989 ರಂದು ನಾಲ್ಕು ವಿಭಾಗಗಳಾಗಿ ಪಾಲು ಪಾರಿಖತ್ ಆಗಿದೆ ಎಂದರೆ ಸರಿಯಲ್ಲ. ಪಾರಿಖತ್ ಆದ ವಿಚಾರ ನನಗೆ ತಿಳಿದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಾರಿಖತ್ ಪತ್ರಕ್ಕೆ ಮಲ್ಲಮ್ಮ, ಸಾವಿತ್ರಮ್ಮ , ಬಸಣ್ಣ ಮಂಜುನಾಥ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ಅಣ್ಣ 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ನಾನು ಏಕಪಕ್ಷಿಯವಾಗಿ ಪಡೆದುಕೊಂಡ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ನಿಜ. ಅದರ ನಂಬರ್ ಎಂ ಎ 22/2022 ಎಂದರೆ ಗೊತ್ತಿಲ್ಲ. ನನ್ನ ಪರವಾಗಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೇನೆ ಎಂದರೆ ನಿಜ. ಶ್ರೀ ಜೆ ಕೆ ಎಂ ವಕೀಲರನ್ನು ನೇಮಕ ಮಾಡಿಕೊಂಡಿದ್ದೇವೆ ಎಂದರೆ ನಿಜ. ಅಲ್ಲಿ ವಾದವಿವಾದ ನಡೆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಣ್ಣನ ಪರವಾಗಿ ವಾದಕ್ಕೆ 28.03.2025 ರಂದು ಪ್ರಕರಣ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ.

ಎದುರುದಾರ ನನ್ನ ಅಣ್ಣನಿಗೆ ಗ್ಯಾಂಗ್ ರಿನ ಆಗಿ ಮನೆಯಲ್ಲಿ ಇದ್ದಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಇತ್ತೀಚೆಗೆ ಆಗಿದೆ ಎಂದು ನುಡಿಯುತ್ತಾರೆ. 1989 ರಿಂದ ನಾನು ಒಟ್ಟು ಕುಟುಂಬದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸಬ್ ರಿಜಿಸ್ಟರ್ ಕಛೇರಿಯಲ್ಲಿ ದಾವಾಸ್ತಿ ಕುರಿತು ಕ್ರಯ ಪತ್ರ ಬರೆದುಕೊಡಬಾರದು ಎಂದು ನೋಟೀಸ್ ಕೊಟ್ಟಿಲ್ಲ ಮತ್ತು ಯಾವುದೇ ಪೊಲೀಸ್

ದೂರು ಕೊಟ್ಟಿಲ್ಲ.

ಅರ್ಜಿಯಲ್ಲಿ ಬರೆದ ಅಂಶಗಳು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಅದಕ್ಕೆ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಏನು ಗೊತ್ತಿಲ್ಲದಿದ್ದರೂ ಸಹ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 16.09.1989 ರಿಂದ ದಾವಾಸ್ತಿಯಲ್ಲಿ ವಿಭಾಗ ಆದಾಗಿನಿಂದ ಒಬ್ಬರ ಹಿಸ್ಸೆಯಲ್ಲಿ ಇನ್ನೊಬ್ಬರಿಗೆ ಹಕ್ಕು, ಸ್ವಾಧೀನ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ವಿರುದ್ಧ ವಿನಾಕಾರಣ ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಎದುರುದಾರರ ಪರ ವಕೀಲರು ಅವರ ಪಕ್ಷಗಾರರಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದ್ದರಿಂದ ಮಾಹಿತಿ ಪಡೆಯಲು ಆಗಿರುವುದಿಲ್ಲ ಎಂದು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು